**ಪಾಠ–4** **ಜನವರಿ 16–22**

# ಕಠಿಣವಾದ ದಾರಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 7:14–16, ಯೆಶಾಯ 7:17–25, ಯೆಶಾಯ 8:1–10, ಯೆಶಾಯ 8:11–15, ಯೆಶಾಯ 8:16–22.

**ಸ್ಮರಣವಾಕ್ಯ : "ಯಾಕೋಬನ ಮನೆತನದವರಿಗೆ ಮುಖವನ್ನು ಮರೆ ಮಾಡಿಕೊಂಡಿರುವ ಯೆಹೋವನಿಗಾಗಿ ಕಾದುಕೊಂಡು ಎದುರು ನೋಡುತ್ತಿರುವೆನು"** (ಯೆಶಾಯ 8:17).

ಉತ್ತರ ಅಮೇರಿಕಾದ ನ್ಯೂಯಾರ್ಕ್‌ನಗರದ ಬೆಂಕಿಯಿಂದ ಉರಿಯುತ್ತಿರುವ ಒಂದು ದೊಡ್ಡಕಟ್ಟಡದ ನಾಲ್ಕನೇ ಅಂತಸ್ತಿನಿಂದ ಒಂದು **ಕುರುಡು ಹುಡುಗಿಯು** ಚೀರುತ್ತಿದ್ದಾಳೆ. ಅಗ್ನಿಶಾಮಕದಳದ ಕಾರ್ಮಿಕನು ದಿಕ್ಕುತೋಚದೆ ಹತಾಶನಾಗಿದ್ದಾನೆ. ಏಣಿ ಜೋಡಿಸಿರುವ ವಾಹನವನ್ನು ಎರಡು ಕಟ್ಟಡದ ನಡುವೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ ಮತ್ತು ಅವಳನ್ನು ಪಾರುಮಾಡಲು ಒಡ್ಡಿದ್ದ ಒಲೆಗೆ ಅವಳನ್ನು ಜಿಗಿಸುವುದಕ್ಕೂ ಆಗುತ್ತಿಲ್ಲ. ಯಾಕೆಂದರೆ ಅವಳಿಗೆ ಏನೂ ಕಾಣಿಸುತ್ತಿಲ್ಲ.

"ಅಂತಿಮವಾಗಿ ಆಕೆಯ ತಂದೆಯು ಅಲ್ಲಿಗೆ ಧ್ವನಿವರ್ಧಕದಿಂದ ತನ್ನ ಮಗಳಿಗೆ ಜಿಗಿ ಎಂದು ಅಪ್ಪಣೆಕೊಟ್ಟ ಕೂಡಲೇ ಆಕೆಯು ಕಟ್ಟಡದ ಕೆಳಗೆ ಒಡ್ಡಿದ್ದ ಒಲೆಗೆ

---

* **ಈ ಪಾಠವನ್ನು ಜನವರಿ 23ರ ಸಬ್ಬತ್ತಿಗೆ ಸಿದ್ಧಪಡಿಸಲಾಗಿದೆ.**

ಜಿಗಿಯಬೇಕಾಗಿತ್ತು. ಆಕೆಯು 4ನೇ ಅಂತಸ್ತಿನಿಂದ ಬಲೆಗೆ ಧುಮುಕಿದಳು. ಅವಳಿಗೆ ಸಣ್ಣ ಒಂದು ಮೂಳೆಯೂ ಮುರಿಯಲಿಲ್ಲ. ತರಚಿದ ಗಾಯಗಳೂ ಆಗಲಿಲ್ಲ. ಅವಳು ಸಂಪೂರ್ಣವಾಗಿ ಅಪಾಯದಿಂದ ಪಾರಾಗಿ ಸಮಾಧಾನಗೊಂಡಳು. ಯಾಕೆಂದರೆ ಆಕೆಯು ತನ್ನ ತಂದೆಯ ಮೇಲೆ ಪೂರ್ಣವಾದ ಭರವಸೆ ಇಟ್ಟಿದ್ದಳು. ತನ್ನ ತಂದೆಯ ಸ್ವರವನ್ನು ಕೇಳಿ ತಾನು ಏನನ್ನು ಮಾಡಬೇಕೋ ಅದನ್ನು ಉತ್ತಮವಾಗಿ ಮಾಡಿದಳು"– ಮೈಕೇಲ್ ಪಿ. ಗ್ರೀನ್‌ರವರು ಸಂಪಾದಿಸಿದ "ಸತ್ಯವೇದದ 1500 ಉಪದೇಶಗಳು" 135ನೇ ಪುಟ.

ಅದೇ ರೀತಿಯಲ್ಲಿ ದೇವರು ತನ್ನ ಮಕ್ಕಳಿಗೆ ಉತ್ತಮವಾದದ್ದನ್ನೇ ಇಟ್ಟಿದ್ದಾನೆ ಎಂಬುದಕ್ಕೆ ಬಲವಾದ ಪುರಾವೆಯನ್ನು ಒದಗಿಸಿದ್ದಾನೆ. ಆದರೆ ಅವರು ಅವನ ಮೃದುಮಧುರವಾದ ಸ್ವರವನ್ನು ತಿರಸ್ಕರಿಸಿದ ಪ್ರಯುಕ್ತ ಅವರೊಂದಿಗೆ ಗರ್ಜಿಸಿ ಮಾತಾಡಬೇಕಾಯಿತು.

**ಭಾನುವಾರ** **ಜನವರಿ 17**

## ಪ್ರವಾದನೆಯು ನೆರವೇರಿತು (ಯೆಶಾಯ 7:14–16)

ಯೆಶಾಯ 7:14–16 ವಚನಗಳಲ್ಲಿ ಜನ ಇಮ್ಮಾನುವೇಲ ಎಂಬ ಒಂದು ಗುರುತು ಅಹಾಜನ ನಿರ್ದಿಷ್ಟವಾದ ಸಂದೇಹಕ್ಕೆ ಸಂಬಂಧಪಟ್ಟದ್ದಾಗಿತ್ತು. ಮಗುವಾದ ಇಮ್ಮಾನುವೇಲನು ಇದು ಬೇಕು ಇದು ಬೇಡವೆಂದು ಹೇಳುವಷ್ಟು ತಿಳುವಳಿಕೆ ಬರುವುದರೊಳಗೆ "**ನೀನು ಯಾವ ಇಬ್ಬರು ರಾಜರುಗಳಿಗೆ ಹೆದರಿ ನಡುಗುತ್ತೀಯೋ ಅವರ ದೇಶವು ನಿರ್ಜನವಾಗುವುದು**" ಎಂದು ದೇವರು ರಾಜನಿಗೆ ತಿಳಿಸಿದನು (ಯೆಶಾಯ 7:16). ಇದು ಸಿರಿಯ ಮತ್ತು ಇಸ್ರಾಯೇಲ್ ರಾಜ್ಯವನ್ನೂ ರಾಜರುಗಳನ್ನೂ ಕುರಿತು ಹೇಳುತ್ತದೆ (ಯೆಶಾಯ 7:1,2, 4–9ನ್ನು ನೋಡಿರಿ). ಈ ರಾಜರುಗಳ ಬಲವು ಅತಿಬೇಗನೆ ಅಳಿದು ಹೋಗುತ್ತದೆ ಎಂಬ ದೇವರ ವಾಗ್ದಾನವನ್ನು ಈ ವಾಕ್ಯಗಳು ಮತ್ತೆ ಹೇಳುತ್ತಿವೆ.

ಯೆಶಾಯನು ಮಗುವು ತಿನ್ನವಂತಹ ಮೊಸರು ಮತ್ತು ಜೇನನ್ನು ಏಕೆ ಹೆಸರಿಸುತ್ತಿದ್ದಾನೆ? (ಯೆಶಾಯ 7:15).

ಯಹೂದದ ಹೊಲಗಳು ಮತ್ತು ಅದರ ಬೆಳೆಗಳು ಅಶ್ಶೂರರಿಂದ ನಾಶ ಮಾಡಲ್ಪಡುತ್ತವೆ (ಯೆಶಾಯ 7:23,25). ಹಾಗಾಗಿ ಎಲ್ಲಾ ಜನರು, ಹಳೆಯ ಒಡಂಬಡಿಕೆಯ ಇಮ್ಮಾನುವೇಲ ಮತ್ತು ಯಾರೇ ಆಗಲಿ ಎಲ್ಲರೂ ಅಲೆಮಾರಿಗಳ ಆಹಾರಪದ್ಧತಿಗೆ ಹಿಂದಿರುಗುತ್ತಾರೆ (ಯೆಶಾಯ 7:21,22). ಆದರೆ ಅವರು ಬಡವರಾಗಿದ್ದಾಗ್ಯೂ ಬದುಕುಳಿಯುವುದಕ್ಕೆ ಸಾಕಾಗುವಷ್ಟು ಆಹಾರವನ್ನು ಹೊಂದಿರುತ್ತಾರೆ.

ಸಿರಿಯ ಮತ್ತು ಉತ್ತರ ಇಸ್ರಾಯೇಲನ್ನು ಕುರಿತ ಪ್ರವಾದನೆಯು ಯಾವಾಗ ನೆರವೇರುತ್ತದೆ? (2 ಅರ 15:29,30; 2 ಅರಸು 16:7–9 ಮತ್ತು 1 ಪೂ.ವೃ. 5:6,26).

ಸುಮಾರು ಕ್ರಿಸ್ತಪೂರ್ವ 734ರಲ್ಲಿ ಯೆಶಾಯನ ಪ್ರವಾದನೆ ಕೊಡಲ್ಪಟ್ಟಿತು. ಅಹಾಜನು ಅಶ್ಶೂರದ ರಾಜ ಮುಮ್ಮಡಿ ತಿಗಳತ್–ಪಿಲೇಸರನಿಗೆ ಕೊಟ್ಟ ಕಪ್ಪ ಕಾಣಿಕೆಗಳಿಗೆ ಪ್ರತಿಯಾಗಿ ಏನು ಮಾಡುವ ಸಂಭವವಿತ್ತೋ ಅದನ್ನು ಮಾಡಿದನು: ಉತ್ತರದೇಶ ಮತ್ತು ಸಿರಿಯ ದೇಶಗಳ ಮೈತ್ರಿಯನ್ನು ಮುರಿದನು, ಇಸ್ರಾಯೇಲ್ ದೇಶದ ಉತ್ತರ ಪ್ರಾಂತ್ಯಗಳನ್ನು ಮತ್ತು ಗಲಿಲಾಯ ಸೀಮೆಯನ್ನು ಗೆದ್ದುಕೊಂಡನು ಮತ್ತೆ ಕೆಲವು ಪ್ರಾಂತ್ಯಗಳಿಂದ ಜನರನ್ನು ಹೊರಕ್ಕೆ ಹಾಕಿ ಆ ಪ್ರಾಂತ್ಯಗಳನ್ನು ಅಶ್ಶೂರದ ಪ್ರಾಂತ್ಯಗಳಿಗೆ ಸೇರಿಸಿಕೊಂಡನು (ಕ್ರಿ.ಪೂ. 734–733) ಹೋಶೇಯನು ಪೆಕನನ್ನು ಹತ್ಯೆ ಮಾಡಿ ಅಶ್ಶೂರನಿಗೆ ಶರಣಾಗತನಾಗಿ ಕಪ್ಪಗಳನ್ನು ಕೊಟ್ಟಾಗ ಅಶ್ಶೂರದ ರಾಜನು ಉಳಿದ ಇಸ್ರಾಯೇಲಿನ ಪ್ರಾಂತ್ಯಗಳನ್ನು ಸಂರಕ್ಷಿಸಿದನು. ಕ್ರಿ.ಪೂ. 733 ಮತ್ತು ಕ್ರಿ.ಪೂ. 732ರಲ್ಲಿ ತಿಗಳತ್ ಪಿಲೇಸರನು ಸಿರಿಯ ದೇಶದ ರಾಜಧಾನಿಯಾದ ದಮಸ್ಕವನ್ನು ಗೆದ್ದುಕೊಂಡನು ಮತ್ತು ಅದನ್ನು ಅಶ್ಶೂರ ರಾಜ್ಯದ ಪ್ರಾಂತ್ಯವನ್ನಾಗಿ ಸೇರಿಸಿಕೊಂಡನು. ಯೆಶಾಯನು ನುಡಿದ ಪ್ರವಾದನೆಯು ಸುಮಾರು ಎರಡು ವರ್ಷಗಳೊಳಗೆ ಸಿರಿಯ ಮತ್ತು ಇಸ್ರಾಯೇಲು ನಿರ್ಣಾಯಕವಾಗಿ ಸೋತುಹೋದವು. ಅಹಾಜನನ್ನು ಭಯಪಡಿಸುತ್ತಿದ್ದ ಆ ಎರಡು ರಾಜ್ಯಗಳು ಸಂಪೂರ್ಣವಾಗಿ ಕೊನೆಗೊಂಡವು.

ಬಳಿಕ ಕ್ರಿ.ಪೂ. 727ರಲ್ಲಿ ಐದನೇ ಶಾಲ್ಮನೇಸರನು ಮೂರನೇ ತಿಗಳತ್

ಪಿಲೇಸರನ ಸ್ಥಾನಕ್ಕೆ ಬಂದನು, ಇಸ್ರಾಯೇಲ್ ಅರಸನಾದ ಹೋಶೀಯನು ಅಶ್ಶೂರಕ್ಕೆ ವಿರುದ್ಧವಾಗಿ ನಿಂತು ತನ್ನ ರಾಜಕೀಯ ಜೀವನದ ಹತ್ಯೆ ಮಾಡಿಕೊಂಡನು. ಕ್ರಿ.ಪೂ. 722ರಲ್ಲಿ ಅಶ್ಶೂರರು ಸಮೇರಿಯದ ರಾಜಧಾನಿಯನ್ನು ವಶಪಡಿಸಿಕೊಂಡು ಅಲ್ಲಿದ್ದ ಸಾವಿರಾರು ಇಸ್ರಾಯೇಲರನ್ನು ಮೆಸೆಪೊಟೇಮಿಯ ಮತ್ತು ಮೇದ್ಯ ಪ್ರಾಂತ್ಯಗಳಿಗೆ ಗಡಿಪಾರು ಮಾಡಿದನು ಅಲ್ಲಿ ಸ್ಥಳೀಯ ಜನರೊಂದಿಗೆ ಬೆರೆತು ತಮ್ಮ ತನದ ಗುರುತನ್ನು ಕಳೆದುಕೊಂಡರು. ಯೆಶಾಯ 7:8ನೇ ವಚನವು "ಅರವತ್ತೈದು ವರುಷಗಳೊ ಎಫ್ರಾಯೀಮ್ಯರು ಭಂಗಪಟ್ಟು ಜನಾಂಗವೆನಿಸಿಕೊಳ್ಳರು" ಎಂದು ಹೇಳಿದ ಮಾತು ನೆರವೇರಿತು. ದೇವರು ಇದು ಯೆಹೂದದ ವೈರಿಗಳಿಗೆ ಹೀಗೆ ಆಗುತ್ತದೆಯೆಂದು ನುಡಿದಿದ್ದನು. ಅದಕ್ಕಾಗಿ ಯೆಹೂದವು ಅಶ್ಶೂರದ ಮೇಲೆ ನಂಬಿಕೆ ಇಡುವ ಅವಶ್ಯಕತೆ ಇರಲಿಲ್ಲ.

ಇದೆಲ್ಲವೂ ಸಂಭವಿಸಿದ ಕಾಲದಲ್ಲಿ ನೀವು ಉತ್ತರಪ್ರಾಂತ್ಯದಲ್ಲಿ ಜೀವಿಸುತ್ತಾ ಇದ್ದಿರಿ ಎಂದು ಅಂದುಕೊಳ್ಳಿರಿ. ಆವಾಗ ನಮ್ಮ ನಂಬಿಕೆಯನ್ನು ನೀಗಿಕೊಳ್ಳುವುದು ಎಷ್ಟು ಸುಲಭವಾಗಿರುತ್ತದೆಯಲ್ಲವೇ? ನಾಳೆ ಅಂತಹ ವಿಪತ್ತುಗಳು ಸಂಭವಿಸಿದಾಗ ನಮ್ಮ ನಂಬಿಕೆಯನ್ನು ದೃಢವಾಗಿಟ್ಟುಕೊಳ್ಳುವಂತೆ ಕಲಿಯಲು ನಾವು ಏನು ಮಾಡಬಹುದು? (1 ಪೇತ್ರ 1:13–25 ವಚನಗಳನ್ನು ನೋಡಿರಿ).

**ಸೋಮವಾರ** **ಜನವರಿ 18**

## ಮುಂಚಿತವಾಗಿ ಕಂಡುಕೊಂಡ ತತ್ಪರಿಣಾಮಗಳು (ಯೆಶಾ 7:12–15)

ಮೇಲೆ ಹೇಳಿರುವ ವಚನಗಳನ್ನು ಓದಿರಿ. ದೇಶಕ್ಕೆ ಏನು ಸಂಭವಿಸುತ್ತದೆಯೆಂದು ಕರ್ತನು ವಿವರಿಸುತ್ತಾನೆ? ನಾವು ಈ ಫಲಿತಾಂಶಗಳನ್ನು ನೋಡಿ ಆಶ್ಚರ್ಯಪಟ್ಟುಕೊಳ್ಳಬಾರದು ಏಕೆ?

**"ದೇವರೊಂದಿಗೆ ಮತ್ತೆ ಸಂಬಂಧ ಹೊಂದುಕೊಳ್ಳುವಂತೆ ತಪ್ಪಾಗಿ ನಡೆದುಕೊಳ್ಳುತ್ತಿದ್ದ ಇಸ್ರಾಯೇಲಿಗೆ ಕರೆಯಮೇಲೆ ಕರೆಯನ್ನು ನೀಡಲಾಯ್ತು. ಜನರ ಮುಂದೆ ನಿಂತು ಆದರಣೀಯವಾಗಿ ಅವರನ್ನು ಎಚ್ಚರಿಸುತ್ತಾ ಪಶ್ಚಾತ್ತಾಪಪಟ್ಟು ಮತ್ತೆ ದೇವರ ಕಡೆ ತಿರುಗಿಕೊಳ್ಳಬೇಕೆಂದು ಹೇಳುತ್ತಿದ್ದ ಪ್ರವಾದಿಗಳ ಮಾತುಗಳು ಮೃದುವಾಗಿರುತ್ತಿದ್ದವು. ಅವರ ಮಾತುಗಳು ದೇವರ ಮಹಿಮೆಗಾಗಿ ಫಲ ನೀಡಿದವು"**

– ಎಲೆನ್ ಜಿ ವೈಟಮ್ಮನವರ "**ಪ್ರವಾದಿಗಳು ಮತ್ತು ಅರಸುಗಳು**" 325ನೇ ಪುಟ.

ಹಾಗಾಗಿ, ನಂಬಿಕೆಯ ಮನುಷ್ಯನಾಗಿರದೆ ಅಂಜಿಕೆಯ ಮನುಷ್ಯನಾಗಿದ್ದ ಅಹಾಜನಿಗೆ ಸಿರಿಯ ಮತ್ತು ಇಸ್ರಾಯೇಲ ರಾಜ್ಯಗಳು ನಾಶವಾಗುತ್ತವೆ ಎಂಬ ವಾರ್ತೆಯು ಅವನಿಗೆ ಒಂದು ಒಳ್ಳೆಯ ಸುದ್ದಿಯಾಗಿತ್ತು. ತನ್ನ ಶತ್ರುಗಳಾದ ಇಸ್ರಾಯೇಲ್ ಮತ್ತು ಸಿರಿಯ ದೇಶಗಳ ವಿರೋಧಕ್ಕಿಂತ ತಾನು ಆಯ್ಕೆ ಮಾಡಿಕೊಂಡ ಅಶ್ಯೂರದ ಮೈತ್ರಿ ಮತ್ತು ಸ್ನೇಹ ಹೆಚ್ಚು ಅಪಾಯಕರವಾಗಿತ್ತು. ದೇವರು ನೀಡಿದ ಮುಕ್ತವಾದ ವಾದ ಬಿಡುಗಡೆಯನ್ನು ನಿರಾಕರಿಸಿದ ಅಹಾಜನಿಗೆ ಸೋಲು ಖಚಿತವಾಗಿತ್ತು. ತಾನು ನಾಶವಾಗುತ್ತಿದ್ದೇನೆ ಎಂಬುದಾಗಿ ಅಹಾಜನು ಅಂದುಕೊಂಡಿದ್ದರೆ ವಿಷಯಗಳು ಇನ್ನೂ ಕೆಟ್ಟದಾಗಿರುತ್ತಿದ್ದವು.

"**ಪ್ರಭುಗಳಲ್ಲಿ ಭರವಸವಿಡುವುದಕ್ಕಿಂತ ಯೆಹೋವನನ್ನು ಆಶ್ರಯಿಸುವುದು ಒಳ್ಳೆಯದು**" (ಕೀರ್ತನೆಗಳು 118:9). ಅಶ್ಯೂರ ಅರಸನಾದ ಪೂಲನು (ತಿಗಳತ್–ಪಿಲೇಸರನು) ಉತ್ತರ ದೇಶವಾದ ಇಸ್ರಾಯೇಲ್ಯರ ಮೇಲೆ ದಾಳಿ ಮಾಡಿದ ಮೇಲೆ ತೃಪ್ತನಾಗಿ ಯೆಹೂದವನ್ನು ಬಿಟ್ಟುಬಿಡುತ್ತಾನೆ (ಗೌರವಿಸುತ್ತಾನೆ) ಎಂಬುದಾಗಿ ಅಹಾಜನು ನಂಬುವುದಾದರೂ ಹೇಗೆ? ಅಶ್ಯೂರರ ಅರಸುಗಳ ಚರಿತ್ರೆಯು ಅವರ ಅಧಿಕಾರದ ದಾಹವು ಎಂದೆಂದಿಗೂ ತಣಿಸಲಾಗದ್ದು ಎಂಬುದಾಗಿ ಸಾಕ್ಷಿ ನುಡಿಯುತ್ತದೆ.

2 ಅರಸುಗಳು 16:10–18 ಮತ್ತು 2 ಪೂರ್ವಕಾಲವೃತ್ತಾಂತ 28:20–25ನ್ನು ಓದಿರಿ. ಅರಸನಾದ ಅಹಾಜನಿಗೆ ಏನಾಗುತ್ತಿದೆ? ಪಾರಮಾರ್ಥಿಕವಾದ ಯಾವ ನಿಯಮವು ಇಲ್ಲಿ ಬಿಚ್ಚಿಕೊಳ್ಳುತ್ತಿದೆ? ಆತನು ತೆಗೆದುಕೊಳ್ಳುವ ಕ್ರಮಗಳಿಗೆ ನಾವು ಆಶ್ಚರ್ಯಪಡಬಾರದು ಏಕೆ? ಎರಡನೇ ಪೂರ್ವಕಾಲವೃತ್ತಾಂತವು 28:20–23 ವಚನಗಳು ಅಹಾಜನು ದೇವರ ಮೇಲೆ ಭರವಸವಿಡುವ ಬದಲು ಅಶ್ಯೂರದ ಸಹಾಯ ಕೇಳಿದ್ದರಿಂದ ಏನಾಯ್ತು ಎಂಬುದನ್ನು ಸಾರಾಂಶ ರೂಪವಾಗಿ ತಿಳಿಸುತ್ತದೆ.

ನಾವು ಮುಟ್ಟಬಹುದಾದ, ನೋಡಬಹುದಾದ, ಅನುಭವಿಸಬಹುದಾದ

ಲೋಕದ ವಿಷಯಗಳನ್ನು (ವಸ್ತುಗಳನ್ನು) ನಂಬುವುದು ನಮ್ಮ ಸ್ವಾಭಾವಿಕ ಗುಣವಾಗಿದೆ. ಆದರೂ ಈ ಲೋಕದಲ್ಲಿ ಕಾಣುವಂಥ ಎಲ್ಲಾ ವಸ್ತುಗಳು ನಾಶವಾಗುತ್ತವೆ ಎಂದು ತಿಳಿದವರಾಗಿದ್ದೇವೆ. 2 ಕೊರಿಂಥ 4:18ನ್ನು ಓದಿರಿ. ಈ ವಚನಗಳು ನಮಗೆ ಏನನ್ನು ಹೇಳುತ್ತವೆ? ಇದರಲ್ಲಿರುವ ಸಂದೇಶವನ್ನು ನಮ್ಮ ಜೀವಿತಕ್ಕೆ ಹೇಗೆ ಅನ್ವಯಿಸಿಕೊಳ್ಳಬಹುದು? ಹಾಗೆ ಮಾಡುವುದರಿಂದ ಅದು ನಮ್ಮಲ್ಲಿ ಯಾವ ವ್ಯತ್ಯಾಸವನ್ನು ಕೊಡುತ್ತದೆ?

**ಮಂಗಳವಾರ** **ಜನವರಿ 19**

## ಒಂದು ಹೆಸರಿನಲ್ಲಿ ಏನಿದೆ? (ಯೆಶಾಯ 8:1–10)

ಯೆಶಾಯನ ಎರಡನೇ ಮಗನ ಜೊತೆ ಚೆಂಡಾಟ ಆಡುತ್ತಿರುವಿರಿ ಎಂದು ಭಾವಿಸಿಕೊಳ್ಳುವಿರಾ? "ಆ ಚೆಂಡನ್ನು ನನ್ನ ಕಡೆಗೆ ಎಸೆಯೋ!!! ಮಹೇರ್ ಶಾಲಾಲ್ ಹಾಷ್ ಬಜ್" ಎಂದು ಕರೆಯುವುದರೊಳಗಾಗಿ ತಡವಾಗಿಬಿಡುವಷ್ಟು ಆತನ ಹೆಸರು ಉದ್ದವಾಗಿದೆ. ಅದರ ಅರ್ಥವು 'ಸೂರೆಗೆ ಆತುರಕೊಳ್ಳೆಗೆ ಅವಸರ' ಎಂಬುದು ಇನ್ನೂ ಉದ್ದವಾಗಿದೆ.

ಈ ಹೆಸರಿನಲ್ಲಿರುವ ಸಂದೇಶವು ತ್ವರೆಯಾಗಿ ಜೈಸು ಎಂದು ಹೇಳುತ್ತದೆ. ಆದರೆ ಯಾರು ಯಾರನ್ನು ಜೈಸಬೇಕು?

ಯೆಶಾಯ 8:1–10ರಲ್ಲಿರುವ ವಚನಗಳು ಯೆಶಾಯ 7ನೇ ಅಧ್ಯಾಯದ ವಚನಗಳನ್ನು ಬಲಪಡಿಸುತ್ತವೆ (ಇಂಬು ಕೊಡುತ್ತವೆ). ಒಂದು ಮಗು ಒಂದು ವಯಸ್ಸನ್ನು ತಲುಪುವುದರೊಳಗಾಗಿ ಸಿರಿಯ ಮತ್ತು ಇಸ್ರಾಯೇಲು ಯುದ್ಧದಲ್ಲಿ ಮಾಡಿದ ಸೂರೆಯನ್ನು (ಕೊಳ್ಳೆಯನ್ನು) ಅವುಗಳ ರಾಜಧಾನಿಯಿಂದ ಅಶ್ಶೂರರು ತೆಗೆದುಕೊಳ್ಳುತ್ತಾರೆ. ಇನ್ನೂ ಹೆಚ್ಚಿನ ಸಂಗತಿಯೇನೆಂದರೆ ಯರೂಸಲೇಮಿನ ಶಿಲೋವಿನಿಂದ ಶಾಂತವಾಗಿ ಹರಿಯುವ ನೀರಿಗೆ ಹೋಲಿಕೆಯಾಗಿರುವ ದೇವರ ಭರವಸೆಯ ಸಂದೇಶವನ್ನು ಯಹೂದವು ತಿರಸ್ಕರಿದ್ದರಿಂದ ಯೂಫ್ರೆಟಿಸ್ ನದಿಯ ಪ್ರವಾಹದಂತಿರುವ ಅಶ್ಶೂರದ ಸೇನಾಬಲವು ಅದನ್ನು ನಾಶಪಡಿಸುತ್ತದೆ.

ಅಹಾಜನು ತನ್ನ ಸಹಾಯಕ್ಕಾಗಿ ಅಶ್ಶೂರದ ಕಡೆಗೆ ತಿರುಗಿಕೊಂಡದ್ದರಿಂದ ಯೆಶಾಯನ ಮಕ್ಕಳ ಹೆಸರುಗಳು ಯುದಾಯವನ್ನೂ ಇಸ್ರಾಯೇಲನ್ನು

ಸೂಚಿಸುತ್ತವೆ: "ಸೂರೆಗೆ ಆತುರಕೊಳ್ಳೆಗೆ ಅವಸರ ಆದರೆ ಉಳಿದವನು ಹಿಂದಿರುಗುವನು" ಈವಾಗಲೂ ಇದರಲ್ಲಿ ಭರವಸೆ ನಿರೀಕ್ಷೆಯಿದೆ ಏಕೆ?

ಅಶ್ಶೂರವು ಇಮ್ಮಾನುವೇಲನ ದೇಶವನ್ನು ತುಂಬಿಕೊಂಡಾಗ್ಯೂ (ಯೆಶಾಯ 8:8) "ದೇವರು ನಮ್ಮೊಂದಿಗಿದ್ದಾನೆ" ಎಂಬ ವಾಗ್ದಾನವು ಅವರಲ್ಲಿತ್ತು (ಯೆಶಾಯ 8:10). ನಿಜ! ನಾವು ಇಲ್ಲಿ ಏನನ್ನು ಕಾಣುತ್ತೇವೆಯೋ ಅದನ್ನೇ ಇಡೀ ಯೆಶಾಯನ ಗ್ರಂಥದಲ್ಲಿ ಕಾಣುತ್ತೇವೆ. ಏನೆಂದರೆ ದೇವರು ಯೆಹೂದ ಮತ್ತು ಇಸ್ರಾಯೇಲಿನಲ್ಲಿರುವ ತನ್ನ ವೈರಿಗಳ ಮೇಲೆ ಸೇನೆಯ ವಿಪತ್ತುಗಳು, ಕಷ್ಟಗಳು ಗಡಿಪಾರು ಮುಂತಾದ ತೀರ್ಪುಗಳನ್ನು ಬರ ಮಾಡುತ್ತಾನಾದರೂ ತನಗೆ ನಂಬಿಗಸ್ತರಾಗಿ ಉಳಿದುಕೊಂಡ ತನ್ನ ಜನರನ್ನು ಮತ್ತೆ ಅವರ ದೇಶದಲ್ಲಿ ಅವರನ್ನು ಪುನರ್‌ಸ್ಥಾಪಿಸುತ್ತಾನೆ (ನೆಲೆಗೊಳಿಸುತ್ತಾನೆ).

ಯೆಶಾಯನು ತನ್ನ ಮಕ್ಕಳ ಹೆಸರನ್ನು ದಾಖಲಿಸಿರುವುದು ಮತ್ತು ಪ್ರವಾದಿನಿಯಾದ ಹೆಂಡತಿಯೊಂದಿಗಿನ ಆತನ ಸಂಬಂಧವು ಧರ್ಮಾನುಸಾರವಾದದು ಎಂದು ಏಕೆ ಹೇಳುತ್ತಾನೆ? (ಯೆಶಾಯ 8:1–3).

ಮಗನು ಒಂದು ಗುರುತಾಗಿ ಮಹತ್ವಹೊಂದಿರುವುದು ಆತನು ಬರುವ ಅವಧಿಯಿಂದಲೇ (ಕಾಲ) ತನ್ನ ತಾಯಿಯ ಗರ್ಭದಲ್ಲಿ ಅಂಕುರನಾದಾಗಿನಿಂದ ಅಶ್ಶೂರವು ಸಿರಿಯ ಮತ್ತು ಇಸ್ರಾಯೇಲನ್ನು ಸೋಲಿಸುವ ಕಾಲವು ಹುಡುಗನು ಒಂದು ವಯಸ್ಸಿನ ಹಂತಕ್ಕೆ ಬರುವಷ್ಟು ಕಾಲಕ್ಕಿಂತ ಕಡಿಮೆಯಾಗಿರುತ್ತದೆ. ಅಂದರೆ ಮಗುವು ಹುಟ್ಟಿದಾಗಿನಿಂದ ತನ್ನ ತಂದೆ ಮತ್ತು ತಾಯಿಯನ್ನು ಬಾಯಿಂದ ಕರೆಯಲು ಆರಂಭಮಾಡುವ ಕಾಲಾವಧಿಗಿಂತ ಮುಂಚೆ. ಹುಡುಗನು ಹುಟ್ಟುವುದಕ್ಕೆ ಮೊದಲು ತಾಯಿಯ ಗರ್ಭದಲ್ಲಿ ಅಂಕುರನಾದಾಗಲೇ ಯೆಶಾಯನು ಅವನ ಹೆಸರನ್ನು ನಿಯಮಾನುಸಾರವಾಗಿ ದಾಖಲೆ ಪಡಿಸಿ ಅವನನ್ನು ಅವನ ಹೆಸರನ್ನು ತದನಂತರದ ಘಟನೆಗಳೊಂದಿಗೆ ಹೋಲಿಸಿನೋಡಲು ಅನುಕೂಲವಾಗುವಂತೆ ಪ್ರವಾದನೆಯನ್ನು ಬಹಿರಂಗಪಡಿಸಿದನು.

ತನ್ನ ಜನರೆಂದು ಹೇಳಿಕೊಂಡು ಮತ್ತೆ ಮತ್ತೆ ತಪ್ಪುಗಳನ್ನು ಎಸಗುತ್ತಿದ್ದಾಗ್ಯೂ ದೇವರು ಅವರನ್ನು ರಕ್ಷಿಸಲು ಸಿದ್ಧನಾಗಿದ್ದನು. ಈ ನಿಯಮವನ್ನು ನಾವು

ನಮ್ಮ ವೈಯಕ್ತಿಕ ಜೀವನಕ್ಕೆ ಅದರಲ್ಲೂ ನಮ್ಮ ಆತ್ಮೀಕ ಜೀವನದಲ್ಲಿ ಸೋಲುಗಳನ್ನು ಪತನಗಳನ್ನು ಹೊಂದಿರುವಾಗ ಹೇಗೆ ಅನ್ವಯ ಮಾಡಿಕೊಳ್ಳಬಹುದು.

**ಬುಧವಾರ** **ಜನವರಿ 20**

## ನಾವು ದೇವರಿಗೆ ಭಯಪಟ್ಟು ನಡೆಯುವಾಗ ಯಾವುದಕ್ಕೂ ಭಯಪಡಬಾರದು (ಯೆಶಾಯ 8:11–15)

ದಿನಾಂಕ 04.03.1933 ರಂದು ಅಮೇರಿಕಾದ ಅಧ್ಯಕ್ಷರಾದ ರೂಸ್‌ವೆಲ್ಟ್ (Roosevelt) ರವರು ದೇಶವು ದೊಡ್ಡ ಆರ್ಥಿಕ ಕುಸಿತವನ್ನು ಅನುಭವಿಸುತ್ತಿರುವಾಗ ತಮ್ಮ ಮೊದಲ ಭಾಷಣದಲ್ಲಿ ಜನರನ್ನು ಕುರಿತು "ನಾವು ಯಾವುದಕ್ಕೂ ಭಯಪಡಬೇಕಾಗಿಲ್ಲ. ಆದರೆ ಭಯವೆಂಬುದಕ್ಕೆ ಭಯಪಡಬೇಕು" ಎಂದು ಹೇಳಿದರು. ಆದರೆ ಯೆಶಾಯನು ನಾವು ದೇವರಿಗೆ ಭಯಪಟ್ಟು ನಡೆದುಕೊಂಡರೆ ಮತ್ತ್ಯಾವುದಕ್ಕೂ ಭಯಪಡಬೇಕಾಗಿಲ್ಲ ಎಂದು ಕುಗ್ಗಿಹೋದ ಜನರಿಗೆ ಸಂದೇಶ ನೀಡುತ್ತಾನೆ.

ದೇವರು ಯೆಶಾಯನಿಗೆ "ಜನರು ಯಾವುದಕ್ಕೆ ಭಯಪಡುತ್ತಾರೋ ಅದಕ್ಕೆ ನೀನು ಭಯಪಡಬೇಡ" ಆದರೆ ತನಗೆ ಭಯಪಟ್ಟು ನಡೆದುಕೊಳ್ಳಬೇಕೆಂದು ಹೇಳುತ್ತಾನೆ (ಯೆಶಾಯ 8:12,13). ಇದು ಪರಿಶುದ್ಧ ಗ್ರಂಥದ ಮುಖ್ಯವಾದ ಸಾರಾಂಶ. ಉದಾಹರಣೆಗೆ ಪ್ರಕಟನೆ 14:6–12 ವಚನಗಳಲ್ಲಿ ಮೂರು ದೂತರು ಲೋಕದ ಎಲ್ಲಾ ಜನರಿಗೆ ನೀವು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ. ಆದರೆ ಪ್ರಕಟನೆ 13ರಲ್ಲಿರುವ ಈ ಲೋಕದ ಮೃಗಕ್ಕೆ ಭಯಪಟ್ಟು ಘನಪಡಿಸಬೇಡಿರಿ ಎಂದು ಸಾರಿ ಹೇಳುತ್ತಾರೆ.

ದೇವರಿಗೆ ಭಯಪಡುವುದು ಎಂಬುದನ್ನು ಹೇಗೆ ಅರ್ಥಮಾಡಿಕೊಳ್ಳುವಿರಿ? ವಿಶೇಷವಾಗಿ ದೇವರನ್ನು ಪ್ರೀತಿಸಬೇಕೆಂಬ ಆಜ್ಞೆಯ ಸನ್ನಿವೇಶದಲ್ಲಿ ಇದರ ಅರ್ಥವೇನು (ಮತ್ತಾಯ 22:37)?

ಪರಿಶುದ್ಧನಾದ ದೇವರಿಗೆ ನಿಜವಾಗಿ ಭಯಪಡುವುದು ಎಂದರೆ ಆತನನ್ನು ಪರಮಾಧಿಕಾರ(ಸರ್ವಶಕ್ತನು)ಎಂದು ಗುರುತಿಸುವುದೇ ಆಗಿದೆ. ಅಂತಹ ಭಯವು ನಮಗೆ ಮತ್ತಾವುದೇ ಭಯವನ್ನು ತೆಗೆದುಹಾಕುತ್ತದೆ. ಆತನು ನಿಮ್ಮ ಪರವಾಗಿದ್ದರೆ.

ಆತನ ಅಪ್ಪಣೆಯಿಲ್ಲದೆ ಯಾರೂ ಸಹ ನಿಮ್ಮನ್ನು ಮುಟ್ಟಲಾರರು. ಆತನಿಗೆ ಎದುರುಬಿದ್ದರೆ ನೀವು ಓಡಿಹೋಗಬಹುದು, ಆದರೆ ಅವಿತುಕೊಳ್ಳಲಾರಿರಿ!

ದೇವರಿಗೆ ಭಯಪಡಬೇಕೆಂಬ ಆಲೋಚನೆಯು 1 ಯೋಹಾನ 4:18ನ್ನು ಪ್ರತಿರೋಧಿಸುವುದಿಲ್ಲವೆ? "ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವುದು; ಪೂರ್ಣಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ".

ನಾನಾ ಬಗೆಯ ಭಯ (ಹೆದರಿಕೆ) ಗಳಿವೆ. ನೀವು ನಿಮ್ಮ ಪ್ರೀತಿಯನ್ನು ಹಂಚಿಕೊಳ್ಳುವ ಸ್ನೇಹಿತನೊಬ್ಬನು ಅದ್ಭುತವಾದ ಸಾಮರ್ಥ್ಯವುಳ್ಳವನಾಗಿದ್ದಾಗ ಅವನು ನಿಮಗೆ ತೊಡಕು (ತೊಂದರೆ) ಮಾಡುತ್ತಾನೆಂಬ ಭಾವದಲ್ಲಿ ಆತನಿಗೆ ಭಯಪಡುವುದಿಲ್ಲ. ಆದರೆ ನಿಮ್ಮ ಸ್ನೇಹದ ಪರಿಮಿತಿಗನುಗುಣವಾಗಿ ಆತನ ಸಾಮರ್ಥ್ಯಕ್ಕೆ ಗೌರವಕೊಡುವಂತಹ ಭಯವು ನಿಮಗಿರುತ್ತದೆ.

ಕ್ರೈಸ್ತರಾಗಿ ನಾವು ಲೋಕವನ್ನಾಗಲೀ ಲೋಕದಲ್ಲಿರುವ ವಸ್ತುಗಳನ್ನಾಗಲೀ ಲೋಕದ ಜನರು ಪ್ರೀತಿಸುವಂತೆ ಪ್ರೀತಿಸುವುದಿಲ್ಲ (1 ಯೋಹಾನ 2:15). ಇದಕ್ಕೆ ಸಮಾಂತರದಲ್ಲಿ ಆಲೋಚಿಸುವವರಾಗಿ, ಕ್ರೈಸ್ತರಾದ ನಾವು ಭಯಪಡಬಾರದ, ಮತ್ತು ಲೋಕದವರು ಭಯಪಡುವ ವಿಷಯಗಳಾವುವು? ಹಾಗಾದರೆ ಅವುಗಳು ಯಾವವು ಮತ್ತು ಯಾಕೆ ನಾವು ಅವುಗಳಿಗೆ ಭಯಪಡಬಾರದು? ಅದೇ ಸಂದರ್ಭದಲ್ಲಿ ಕ್ರೈಸ್ತರಾದ ನಾವು ಲೋಕದವರು ಭಯಪಡದಂತಹ ಯಾವುಗಳಿಗೆ ಭಯಪಡಬೇಕು? (ಉದಾಹರಣೆಗೆ ಮತ್ತಾಯ 10:28 ಮತ್ತು ಯೆರೆ 10:2,3ನ್ನು ನೋಡಿರಿ).

**ಗುರುವಾರ** **ಜನವರಿ 21**

## ಕೃತಘ್ನರಾಗಿ ಜೀವಿಸುತ್ತಾ ಸತ್ತಂತಿರುವರ ಕತ್ತಲು

### (ಯೆಶಾಯ 8:16–22)

ಮೇಲೆ ಹೇಳಿರುವ ವಾಕ್ಯಗಳನ್ನು ಓದಿರಿ. ಇದು ಯಾವುದನ್ನು ಕುರಿತು ಮಾತಾಡುತ್ತದೆ? ಇದು ಅರಸನಾದ ಅಹಾಜನಿಗೆ ಸಂಬಂಧಪಡುತ್ತದೆ? ನಿಮ್ಮ ಆಲೋಚನೆಗಳ ಸಾರಾಂಶವನ್ನು ಹೇಳಿರಿ.

ಅರಸನಾದ ಅಹಾಜನು ಬಹಳವಾದ ಆಚರಣ ಪದ್ಧತಿಗಳನ್ನೊಳಗೊಂಡ ಅನ್ಯಧರ್ಮದಲ್ಲಿ ತನ್ನನ್ನು ಆಳವಾಗಿ ತೊಡಗಿಸಿಕೊಂಡಿದ್ದನು (2 ಅರಸುಗಳು 16:3,4,10–15 ಮತ್ತು 2 ಪೂ.ವೃ. 28:2–4 ಮತ್ತು 23–25 ವಚನಗಳು) ಧರ್ಮೋಪದೇಶಕಾಂಡ 32:17ನೇ ವಚನದೊಡನೆ ಹೋಲಿಸಿ ನೋಡಿರಿ. ಅವರು ದೆವ್ವಗಳಿಗೆ ಬಲಿಯನ್ನು ಅರ್ಪಿಸುತ್ತಿದ್ದರು (1 ಕೊರಿಂಥ 10:20). ಆಧುನಿಕ ಮಾಟಗಾರಿಕೆಯ ಅನೇಕ ಅಂಶಗಳು ಪುರಾತನ ಕಾಲದಲ್ಲಿ ಪೂರ್ವದೇಶಗಳಲ್ಲಿದ್ದ ಮಾಟಗಾರಿಕೆಯನ್ನು ಹೋಲುತ್ತವೆ. ಇವುಗಳನ್ನು ಸತ್ಯವೇದದಂತೆ ಬರೆಯಲ್ಪಟ್ಟ ಬೇರೆ ಬರಹಗಳಲ್ಲಿ ಕಾಣುತ್ತೇವೆ. ಹೌದು! ಇಂದಿಗೂ ಇರುವ ಅನೇಕ ಆಧುನಿಕ ಪದ್ಧತಿಗಳು ಕೇವಲ ಪುರಾತನ ಕಾಲದ ಪದ್ಧತಿಗಳಾಗಿದ್ದು ಸಮಾಕಾಲೀನ ರೂಪದಲ್ಲಿ ವ್ಯಕ್ತಗೊಂಡಿವೆ.

ಯೆಶಾಯನು ವಿವರಿಸಿರುವ ಹತಾಶೆಯು ದೇವರನ್ನು ಬಿಟ್ಟು ಬೇರೆಯದನ್ನು ಆಶ್ರಯಿಸಿಕೊಂಡುದರ ಫಲಿತಾಂಶವಾಗಿದೆ (ಯೆಶಾಯ 8:21,22) ಇದಕ್ಕೆ ಅಹಾಜನು ಸರಿಹೊಂದುತ್ತಾನೆ (2 ಪೂ.ವೃ.28:22,23ರ ಜೊತೆಗೆ ಹೋಲಿಸಿ ನೋಡಿರಿ). ಜನರು ಕೋಪೋದ್ರಿಕ್ತರಾಗಿ ತಮ್ಮ ರಾಜನನ್ನು ಶಪಿಸತೊಡಗಿದರೆಂದು ಯೆಶಾಯನು ಸೂಚಿಸುತ್ತಾನೆ (ಯೆಶಾಯ 8:21) ಜನರನ್ನು ಇಂತಹ ಶಪಿಸುವ ಪದ್ಧತಿಯೆಡೆಗೆ ಮುನ್ನೆಡಿಸಿದ ಪ್ರಯುಕ್ತ ಅಹಾಜನು ಜನರಿಂದ ಶಪಿಸಿಕೊಂಡು ಎಚ್ಚರಿಕೆ ಪಟ್ಟುಕೊಳ್ಳುವಂತಾಯ್ತು. ಆ ಇದರಿಂದ ಅಹಾಜನು ಮರಣ ಹೊಂದಿದಾಗ ರಾಜಸ್ಮಶಾನದಲ್ಲಿ ಹೂಣಿಡುವಷ್ಟು ಗೌರವವನ್ನು ಕಳೆದುಕೊಂಡಿದ್ದರಿಂದ ಆತನನ್ನು ಬೇರೊಂದು ಸ್ಥಳದಲ್ಲಿ ಹೂಣಿಟ್ಟರು (2 ಪೂ.ವೃ. 28:27).

ಅನ್ಯದೇವತೆಗಳನ್ನು ಪೂಜಿಸುವ ಬಗ್ಗೆ ಈ ವಚನಗಳು ಏನು ಹೇಳುತ್ತವೆ? (ಯಾ.ಕಾಂಡ 20:27, ಧ.ಕಾಂಡ 18:9–14).

ಅನ್ಯದೇವತೆಗಳನ್ನು ಪೂಜಿಸುವ ಪದ್ಧತಿಯಿಂದ ತಮ್ಮನ್ನು ಪ್ರತ್ಯೇಕ ಪಡಿಸಿಕೊಳ್ಳುವುದು ದೇವರಿಗೆ ನಿಷ್ಠೆ ತೋರಿಸುವುದಾಗಿತ್ತು. 1 ಪೂ.ವೃ.10:13,14 ಈ ನಿಯಮವನ್ನು ಅರಸನಾದ ಸೌಲನ ವಿಷಯಕ್ಕೆ ಅನ್ವಯಿಸಬಹುದಾಗಿತ್ತು. ಹಾಗಾಗಿ ಸೌಲನು ತನ್ನ ಅವಿಧೇಯತನದ ನಿಮಿತ್ತ ಮರಣ ಹೊಂದಿದನು.

ದೇವರು ಹೇಳಿದ ಆಜ್ಞೆಗಳಿಗೆ ವಿಧೇಯನಾಗದ ಕಾರಣ ಆತನು ದೇವರಿಗೆ ಅಪನಂಬಿಗಸ್ತನಾಗಿದ್ದನು. ಹೆಚ್ಚಿನ ವಿಷಯವೇನೆಂದರೆ ಆತನು ತನ್ನ ಸಹಾಯಕ್ಕಾಗಿ (ಮಾರ್ಗದರ್ಶನಕ್ಕೆ) ಮಾಧ್ಯಮದವರ ಸಲಹೆಯನ್ನು ಪಡೆದುಕೊಂಡು ಆತನು ದೇವರು ಕೊಡುವ ಮಾರ್ಗದರ್ಶನವನ್ನು ಬಯಸಲಿಲ್ಲ. ಆದುದರಿಂದ ದೇವರು ಆತನನ್ನು ಮರಣಕ್ಕೆ ಒಪ್ಪಿಸಿದನು ಮತ್ತು ಇಷಯನ ಮಗನಾದ ದಾವೀದನಿಗೆ ರಾಜ್ಯವನ್ನು ಒಪ್ಪಿಸಿದನು.

ನಿಮ್ಮ ಜೀವನದಲ್ಲಿ ನಿಮ್ಮ ಸುತ್ತಲೂ ನಿಮ್ಮ ಮೇಲೆ ಬೀರುವ ಪ್ರಭಾವಗಳ ಕಡೆಗೆ ನೋಡಿರಿ. ಇಂತಹ ಪೂಜಾಪದ್ಧತಿಗಳ ಮತ್ತು ಬೈತಾಳಿಕತೆಯ ವಿವಿಧ ಪದ್ಧತಿಗಳ ಹಿಂದಿರುವ ವಿಧಾನಗಳಾವುವು? ಇವುಗಳ ಪ್ರಭಾವದಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ ನಿಮ್ಮ ಮತ್ತು ನಿಮ್ಮ ಕುಟುಂಬದ ಮೇಲೆ ಬೀರುವ ಇವುಗಳ ಪ್ರಭಾವವನ್ನು ತಗ್ಗಿಸಲು ಏನು ಮಾಡಬಹುದು?

**ಶುಕ್ರವಾರ** **ಜನವರಿ 22**

**ಹೆಚ್ಚಿನ ಚಿಂತನೆಗೆ :** ಎಲೆನ್ ಜಿ ವೈಟಮ್ಮನವರ ಮಹಾಹೋರಾಟ ಪುಸ್ತಕದಲ್ಲಿ "ಸತ್ತವರಾದ ನಮ್ಮ ಜನ ನಮ್ಮೊಂದಿಗೆ ಮಾತಾಡಬಲ್ಲರೆ?" ಎಂಬ ಅಧ್ಯಾಯದಲ್ಲಿ ಪುಟ 551–562.

"ಇಂದಿನ ದಿನದಲ್ಲಿರುವಂತಹ ಬೇತಾಳಿಕರ ಹಾಗೆಯೇ ಯಹೂದ್ಯರ ಕಾಲದಲ್ಲಿಯೂ ಅದನ್ನು ಮಾಡಬಲ್ಲೆವು ಎಂದು ಹೇಳಿಕೊಳ್ಳುವ ಬೇತಾಳಿಕರಿದ್ದರು. ಅವರು ಸತ್ತವರೊಂದಿಗೆ ಸಂವಾದ ಮಾಡುವುದಾಗಿ ಹೇಳುತ್ತಿದ್ದರು. ಲೋಕದಿಂದ ಕರೆಯುವವರನ್ನು ಆದರೆ ಈ 'ಪರಿಚಿತ ಆತ್ಮಗಳು' ಬೇರೆ ಲೋಕದಿಂದ ಕರೆಯಲ್ಪಟ್ಟ ಸಂದರ್ಶಕರು ಎಂಬುದನ್ನು ಸತ್ಯವೇದವು 'ದೇವಗಳ ಆತ್ಮಗಳು' ಎಂದು ಕರೆಯುತ್ತದೆ. ಅರಣ್ಯಕಾಂಡ 25:1–3 ಮತ್ತು ಕೀರ್ತನೆಗಳು 106:28 ಮತ್ತು 1 ಕೊರಿಂಥ 10:20 ಪ್ರಕಟನೆಗಳು 16:14ನ್ನು ಹೋಲಿಸಿರಿ). ಈ ಪರಿಚಿತ ಆತ್ಮಗಳೊಂದಿಗೆ ವ್ಯವಹರಿಸುವ ಕೆಲಸವು ಕರ್ತನಿಗೆ ಹೇಯಕರವಾದುದೆಂದು ಹೇಳಲ್ಪಟ್ಟಿದೆ ಮತ್ತು ಹಾಗೆ ಮಾಡುವವರಿಗೆ ಮರಣಶಿಕ್ಷೆ ಕೊಟ್ಟು ಅದನ್ನು

ಮಾಡದ ಹಾಗೆ ದೇವರು ನಿಷೇಧಿಸುತ್ತಾನೆ (ಯಾಜಕಕಾಂಡ 19:31 ಮತ್ತು 20:27). ಈವಾಗ ಬೇತಾಳಿಕೆ ಎಂಬ ಹೆಸರೇ ಬಹಳ ಹೇಯಕರವಾಗಿ ಪರಿಗಣಿಸಲ್ಪಟ್ಟಿದೆ. ಮನುಷ್ಯರು ದುರಾತ್ಮಗಳೊಡನೆ ಮಾತುಕತೆ (ಸಂವಾದ) ಮಾಡಬಹುದು ಎಂಬುದನ್ನು ಕತ್ತಲೆಯುಗದ ಕಟ್ಟುಕಥೆ ಎಂದು ಪರಿಗಣಿಸಲ್ಪಟ್ಟಿದೆ. ಆದರೆ ಬೇತಾಳಿಕೆಯ ನೂರಾರು, ಸಾವಿರಾರು ಹೌದು ಲಕ್ಷಾಂತರ ಜನರನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತಿದೆ. ಇದು ವಿಜ್ಞಾನಕ್ಷೇತ್ರಕ್ಕೂ ಪ್ರವೇಶ ಮಾಡಿದೆ, ಸಭೆಗಳನ್ನು ಸಹ ಆಕ್ರಮಿಸಿಕೊಂಡಿದೆ ಮತ್ತು ಶಾಸನ ಸಭೆಗಳಲ್ಲೂ ಜಾಗ ಪಡೆದುಕೊಂಡಿದೆ. ಮಾತ್ರವಲ್ಲದೆ ಅರಸುಗಳ ಆಸ್ಥಾನವನ್ನೂ ಸಹ ಹೊಕ್ಕಿದೆ. ಈ ದೊಡ್ಡವಂಚನೆಯು ಹೊಸ ವೇಷವನ್ನು ಧರಿಸಿಕೊಂಡು ಚಾಲ್ತಿಗೆ ಬಂದಿದೆ.

ಬೇತಾಳಿಕೆಯು ದೇವರು ಪೂರ್ವಕಾಲದಲ್ಲಿ ನಿಷಿದ್ಧಪಡಿಸಿದ್ದ ಮಾಟಗಾರಿಕೆಯು ಹೊಸವೇಷವನ್ನು ಧರಿಸಿಕೊಂಡು ಚಾಲ್ತಿಗೆ ಬಂದಿರುವ ಮಹಾವಂಚನೆಯಾಗಿದೆ" – ಎಲೆನ್ ಜಿ ವೈಟಮ್ಮನವರ 'ಮಹಾಹೊರಾಟ' ಪುಟ 556.

## ಚರ್ಚಿಸಬೇಕಾದ ಪ್ರಶ್ನೆಗಳು

1. ಸಿನಿಮಾ, ಪುಸ್ತಕಗಳು, ದೂರದರ್ಶನ ಮತ್ತು ಜನಪ್ರಿಯ ಸಂಸ್ಕೃತಿಗಳಲ್ಲಿ ಕಂಡುಬರುವ ಬೇತಾಳಿಕೆಯು ವಿಚಾರಗಳ ಬಗ್ಗೆ ಚರ್ಚಿಸಿರಿ. ಬೇತಾಳಿಕೆಯನ್ನು ನಿಲ್ಲಿಸುವುದಕ್ಕೆ ನಮ್ಮಿಂದ ಏನೂ ಮಾಡಲಾಗದಿದ್ದಾಗ ಇದನ್ನು ಜನರು ಅಪಾಯಕರವಲ್ಲದ ಆಕರ್ಷಣೆ ಮಾತ್ರ ಬೇರೇನೂ ಅಲ್ಲ ಎಂಬುದಾಗಿ ಹೇಳುವುದರಿಂದ ಆಗುವ ಅನಾಹುತದ ಬಗ್ಗೆ ಜನರಿಗೆ ಹೇಗೆ ಎಚ್ಚರಿಕೆ ನೀಡಬಹುದು? ಈ ತರದ ವಂಚನೆಗಳಿಗೆ ಗುರಿಯಾಗದಂತೆ ಸುರಕ್ಷಿತರಾಗಿರಲು ಸತ್ತವರ ಸ್ಥಿತಿಯ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿರುವುದು ಬಹಳ ಮುಖ್ಯವಾಗಿದೆ ಏಕೆ?

2. ಅವರಲ್ಲಿ ಬೆಳಕು ಇಲ್ಲದಿರುವುದರಿಂದ ವಾಕ್ಯವನ್ನು ಧರ್ಮ–ಶಾಸ್ತ್ರಾನುಸಾರವಾಗಿ ಮತ್ತು ಸಾಕ್ಷಿಗನುಗುಣವಾಗಿ ಹೇಳಲಾರರು– ಯೆಶಾಯ 8:20. ಇದನ್ನು ಸರಿಯಾಗಿ ಅರ್ಥಮಾಡಿಕೊಂಡು ನಿಮ್ಮ ಸ್ವಂತವಾಕ್ಯದಲ್ಲಿ ಅಭ್ಯಾಸ ಮಾಡಿರಿ, ಹಾಗೆಯೇ ತರಗತಿಯಲ್ಲಿರುವ ಬೇರೆ ಬೇರೆ ಜನರು

ಇದನ್ನು ಗಟ್ಟಿಯಾಗಿ (ಸತ್ಯವೇದ ಬೇರೆ ಬೇರೆ ಆವೃತ್ತಿಗಳಿಂದ) ಓದುವಂತೆ ಮಾಡಿರಿ. ಈ ವಾಕ್ಯದಲ್ಲಿ ದೇವರು ನಮಗೆ ಏನು ಹೇಳುತ್ತಿದ್ದಾನೆ?

3. ದೇವರನ್ನು ಪ್ರೀತಿಸಲೂ ಬೇಕು ಮತ್ತು ಭಯಪಡಲೂ ಬೇಕು ಎಂಬ ಆಲೋಚನೆಯ ಬಗ್ಗೆ ಹೆಚ್ಚಾದ ಚಿಂತನೆ ಮಾಡಿರಿ. ಯಾವ ರೀತಿಯಲ್ಲಿ ಪ್ರೀತಿಯು ಭಯದಿಂದ ಚಿಗುರೊಡೆಯುತ್ತದೆ? ಅಥವಾ ಭಯವು ಪ್ರೀತಿಯಿಂದ ಚಿಗುರೊಡೆಯುತ್ತದೆ? ಚರ್ಚಿಸಿರಿ.

**ಸಾರಾಂಶ:** ಯೆಶಾಯನ ಕೆಲಸಗಳಿಂದ, ಕುಟುಂಬದಿಂದ ಮತ್ತು ತನ್ನ ವಾಕ್ಯದಿಂದ ದೇವರು ಎಚ್ಚರಿಕೆಯ ಮತ್ತು ನಿರೀಕ್ಷೆಯ ಸಂದೇಶಕ್ಕೆ ಹೆಚ್ಚಿನ ಬಲ ನೀಡಿದ್ದಾನೆ. ದೇವರು ತಾನು ಮಾಡುವುದನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ ಎಂದು ಆತನ ಮೇಲೆ ಭರವಸವಿಡುವುದೇ ನಮಗೆ ಕ್ಷೇಮಕರವಾಗಿದೆ. ನಾವು ಆತನಿಗೆ ಅವಕಾಶ ನೀಡಿದರೆ ಆತನಿಗೆ ನಮ್ಮನ್ನು ಪ್ರೀತಿಸುವ, ನಡೆಸುವ ಮತ್ತು ಕಾಪಾಡುವ ಸಾಮರ್ಥ್ಯವುಳ್ಳವನಾಗಿದ್ದಾನೆ. ಯಾರು ಆತನನ್ನು ಬಿಟ್ಟು ಇನ್ನಿತರ ಶಕ್ತಿಗಳನ್ನು ಅವಲಂಬಿಸುತ್ತಾರೋ ಆವಾಗ ಅಲ್ಲಿ ಕತ್ತಲೆ ಮಾತ್ರವಿರುತ್ತದೆ.